ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 88-98
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರಾಜನ್ ದೈವ ಆರಾಧನೆ ಮತ್ತು ಪ್ರತಿಷ್ಠಿತ ಮನೆತನಗಳ ಸಂಬಂಧ ಸ್ವರೂಪ

**ಚೇತನ್ ಎಂ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೇರಳ ಕೇಂದ್ರೀಯ ವಿಶ್ವವಿದ್ಯಾಲಯ, ಪೆರಿಯ ಕಾಸರಗೋಡು

**Abstract:**
*ತುಳುನಾಡಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ರಾಜನ್ ದೈವಗಳ ಆರಾಧನೆ ಹಾಗೂ ಪ್ರತಿಷ್ಠಿತ ಮನೆತನಗಳ ನಡುವಿನ ಸಂಬಂಧವನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಅರಮನೆ, ಬೀಡು, ಗುತ್ತು, ಚಾವಡಿ, ಬಾವ, ಪರಾರಿ, ಬರ್ಕೆ, ನಟ್ಟಿಲ್ಲ್, ಭಂಡಾರ ಮನೆ ಮತ್ತು ಗುರಿಕಾರ ಮನೆಗಳಂತಹ ಸಾಂಪ್ರದಾಯಿಕ ಸಂಸ್ಥೆಗಳ ಐತಿಹಾಸಿಕ, ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಮಹತ್ವವನ್ನು ಇಲ್ಲಿ ಚರ್ಚಿಸಲಾಗಿದೆ. ಈ ಮನೆತನಗಳು ಭೂಮಿಯ ಒಡೆತನ, ಗ್ರಾಮಾಡಳಿತ, ಸಾಮಾಜಿಕ ಶ್ರೇಣೀಕರಣ ಮತ್ತು ದೈವಾರಾಧನೆಯ ಆಚರಣೆಗಳಲ್ಲಿ ವಹಿಸಿದ ಪಾತ್ರವನ್ನು ಲೇಖನವು ವಿಶ್ಲೇಷಿಸುತ್ತದೆ. ಪಾಡ್ದನಗಳು, ಮೌಖಿಕ ಪರಂಪರೆಗಳು ಮತ್ತು ಐತಿಹಾಸಿಕ ಆಚರಣೆಗಳ ಮೂಲಕ ದೈವಗಳು ಹಾಗೂ ಪ್ರತಿಷ್ಠಿತ ಮನೆತನಗಳ ನಡುವಿನ ಸಂಬಂಧದ ಸ್ವರೂಪವನ್ನು ವಿವರಿಸಲಾಗಿದೆ. ರಾಜನ್ ದೈವಗಳ ಆರಾಧನೆಯು ತುಳುನಾಡಿನ ಸಾಂಪ್ರದಾಯಿಕ ಅಧಿಕಾರ ವ್ಯವಸ್ಥೆ, ಸಾಮಾಜಿಕ ಗೌರವ ಮತ್ತು ಸಾಂಸ್ಕೃತಿಕ ಅಸ್ಮಿತೆಯೊಂದಿಗೆ ನಿಕಟ ಸಂಬಂಧ ಹೊಂದಿರುವುದನ್ನು ಈ ಅಧ್ಯಯನವು ಸ್ಪಷ್ಟಪಡಿಸುತ್ತದೆ. ತುಳುನಾಡಿನ ಪರಂಪರೆ, ಜನಪದ ಸಂಸ್ಕೃತಿ ಮತ್ತು ಸಾಮಾಜಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಇಂತಹ ಅಧ್ಯಯನಗಳು ಮಹತ್ವದ್ದಾಗಿವೆ.*

**Keywords:** *ರಾಜನ್ ದೈವ ಆರಾಧನೆ, ತುಳುನಾಡು, ಪ್ರತಿಷ್ಠಿತ ಮನೆತನಗಳು, ಸಾಂಪ್ರದಾಯಿಕ ಆಡಳಿತ ವ್ಯವಸ್ಥೆ, ಸಾಂಸ್ಕೃತಿಕ ಪರಂಪರೆ.*

## ಪೀಠಿಕೆ

ತುಳುನಾಡಿನ ಆರಾಧನಾ ಪರಂಪರೆಯಲ್ಲಿ ರಾಜನ್ ದೈವ ಆರಾಧನೆಯು ವಿಶಿಷ್ಟವಾದುದು. ತುಳುನಾಡು ಎಂದು ಸಾಂಸ್ಕೃತಿಕವಾಗಿ ಗುರುತಿಸುವ ಪ್ರದೇಶದಲ್ಲಿ ಗ್ರಾಮ, ಮಾಗಣೆ, ಗುತ್ತು, ಬೀಡು, ಚಾವಡಿ ಎನ್ನುವ ವಿಭಾಗವನ್ನು ಅನುಸರಿಕೊಂಡು ಅನೇಕ ದೈವಗಳು ಆರಾಧನೆಯಾಗುತ್ತವೆ. ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯಲ್ಲಿ ಅರಮನೆಯಿಂದ ಬೀಡು, ಬೀಡಿನಿಂದ ಗುತ್ತು ನಿದೇಶಿಸಲ್ಪಡುವಂತೆ ಅರಮನೆ ದೈವದಿಂದ ಬೀಡಿನ ದೈವ, ಬೀಡಿನ ದೈವದಿಂದ ಗ್ರಾಮದ ದೈವವು ನಿರ್ದೇಶಿತಗೊಳ್ಳುತ್ತದೆ. ಆಡಳಿತದ ರಾಜಕೀಯ ಘಟಕಗಳಾಗಿರುವ ಸೀಮೆ, ಮಾಗಣೆ, ಹೋಬಳಿ, ಗ್ರಾಮ, ಬೀಡು, ಗುತ್ತು ಇವುಗಳು ಭೂತಗಳ ಅಧಿಕಾರ ಮತ್ತು ಅಂತಸ್ತನ್ನು ನಿರ್ಧರಿಸುತ್ತದೆ.[1] ಈ ಅಧಿಕಾರ ಕೇಂದ್ರಗಳಿಗೂ ರಾಜನ್ ದೈವಗಳಿಗೂ ಸಂಬಂಧವಿದೆ. ಯಾವುದೇ ಗ್ರಾಮ, ಮಾಗಣೆ ಸಂಬಂಧಿಸಿ ನೇಮ

[1] .ಚಿನ್ನಪ್ಪ ಗೌಡ, ಕೆ. (1990). *ಭೂತಾರಾಧನೆ ಜಾನಪದೀಯ ಅಧ್ಯಯನ.* ಪು.49

**Please cite this article as:** ಚೇತನ್, ಎಂ. (2026). ರಾಜನ್ ದೈವ ಆರಾಧನೆ ಮತ್ತು ಪ್ರತಿಷ್ಠಿತ ಮನೆತನಗಳ ಸಂಬಂಧ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(4), 88–98

ನಡೆಯುವುದಿದ್ದರೂ ಈ ಪ್ರತಿಷ್ಠಿತ ಮನೆತನಗಳ ಸದಸ್ಯರು ಹಾಜರಿರಬೇಕು. ದೈವವು ಈ ಮನೆತನಗಳಿಗೆ ಸೂಕ್ತವಾದ ಗೌರವವನ್ನು ನೀಡುತ್ತದೆ. ರಾಜನ್ ದೈವಗಳು ಮತ್ತು ಪ್ರತಿಷ್ಠಿತ ಮನೆತನಗಳ ಸಂಬಂಧವನ್ನು ಅಧಿಕಾರ ಮತ್ತು ನಿಯಂತ್ರಣದ ಹಿನ್ನೆಲೆಯಲ್ಲಿ ಗಮನಿಸಬಹುದು. ಪ್ರಸ್ತುತ ಪ್ರಬಂಧದಲ್ಲಿ ಪ್ರತಿಷ್ಠಿತ ಮನೆತನದೊಂದಿಗೆ ದೈವ ಸಂಬಂಧದ ಸ್ವರೂಪವನ್ನು ಪ್ರಸ್ತಾಪಿಸಲಾಗಿದೆ.

**ಅರಮನೆ**

ತುಳುನಾಡಿನಲ್ಲಿ ಅನೇಕ ಮಂದಿ ಸಾಮಂತ ಅರಸರು ಆಳ್ವಿಕೆ ನಡೆಸಿದ್ದರು. ಸಾಮಂತ ಅರಸರನ್ನು ತುಂಡರಸರು ಎಂದೂ ಕರೆಯುತ್ತಾರೆ. ತುಳುನಾಡಿನಲ್ಲಿ ಒಂದು ಸೀಮೆಗೆ ಬಂಗಾಡಿಯ ಬಂಗರು ಅರಸರಾಗಿದ್ದರೆ, ಮತ್ತೊಂದು ಸೀಮೆಯನ್ನು ವೇಣೂರಿನ ಅಜಿಲರು ಆಡಳಿತ ನಡೆಸುತ್ತಿದ್ದರು. ಪುತ್ತಿಗೆಯ ಚೌಟ ಅರಸರು ಒಂದು ಭಾಗದ ರಾಜ್ಯಭಾರ ನಡೆಸುತ್ತಿದ್ದರೆ, ಡೊಂಬರಸರು ವಿಟ್ಲ ಸೀಮೆಯ ಆಡಳಿತಗಾರರಾಗಿದ್ದರು. ಹೀಗೆ ತುಳುನಾಡು ಪ್ರಾಂತ್ಯವನ್ನು ಸೀಮೆಗಳನ್ನಾಗಿ ವಿಭಾಗಿಸಿಕೊಂಡು ಆಡಳಿತವನ್ನು ನಡೆಸುದ್ದರು.

ಈ ತುಂಡರಸರುಗಳು ಆಳ್ವಿಕೆ ಮಾಡುತಿದ್ದ ವ್ಯಾಪ್ತಿಗೆ ಸೀಮೆ ಎಂದು ಕರೆಯುತ್ತಿದ್ದರು. ಈ ಸೀಮೆ ಎನ್ನುವುದು ಹಲವು ಮಾಗಣೆಗಳ ಒಂದು ಕೂಟ. ಸೀಮೆ ಎಂದು ಕರೆಸಿಕೊಳ್ಳಲು ಇಂತಿಷ್ಟೇ ಮಾಗಣೆಗಳು ಇರಬೇಕು ಎಂದು ನಿರ್ಧರಿಸಲು ಅಸಾಧ್ಯ. ಕೆಲವು ಅರಸರ ಸೀಮೆಯ ವ್ಯಾಪ್ತಿಯು ಅವರ ಪ್ರಭಾವ, ಸಾಮರ್ಥ್ಯಕ್ಕೆ ಅನುಸಾರವಾಗಿ ವಿಸ್ತಾರವಾಗಿಯೂ ಇರಬಹುದು. ಕೆಲವು ಅರಸರ ಸೀಮೆಯು ಎರಡು ಮೂರು ಮಾಗಣೆ ವ್ಯಾಪ್ತಿಗೆ ಸೀಮಿತವಾಗಿರುವುದೂ ಉಂಟು. ಹಾಗಾಗಿ ಸೀಮೆ ಎನ್ನುವುದನ್ನು ಅಧಿಕೃತವಾಗಿ ಇಂತಿಷ್ಟೇ ಮಾಗಣೆಗಳಿಂದ ಕೂಡಿರಬೇಕೆಂದು ಗಡಿ ಕೊರೆಯುವಂತಿಲ್ಲ. ಈ ಸೀಮೆಗಳನ್ನೇ ಬಂಗರ ಸೀಮೆ, ಅಜಿಲರ ಸೀಮೆ, ಚೌಟರ ಸೀಮೆ ಇತ್ಯಾದಿಯಾಗಿ ಗುರುತಿಸುವುದು ಕಂಡುಬರುತ್ತದೆ.

ಈ ಸಾಮಂತ ಅರಸರು ಸೀಮೆಯ ಅಧಿಕೃತ ಆಡಳಿತಗಾರರು. ಸೀಮೆಗೆ ಸಂಬಂಧಿಸಿದ ಕಾನೂನು, ರೀತಿ ರಿವಾಜುಗಳು ಈ ಅರಸರ ಮೂಲಕವೇ ಜಾರಿಗೊಳ್ಳುತ್ತಿತ್ತು. ಶಾಸನ ರೂಪಿಸುವುದು ಮತ್ತು ಅದನ್ನು ಆಡಳಿತದಲ್ಲಿ ಕಾರ್ಯಗತಗೊಳಿಸಲು ತಮ್ಮದೇ ಆದ ಕಾರ್ಯತಂತ್ರವನ್ನು ಸೀಮೆಯ ಆಡಳಿತದ ಚುಕ್ಕಾಣಿ ವಹಿಸಿದ ಅರಸನು ನಿರ್ವಹಿಸುತ್ತಿದ್ದನು. ಈ ಸಾಮಂತರಾಜರು ವಾಸಮಾಡುವ ಸ್ಥಳವನ್ನು ಅರಮನೆ ಎಂದು ಕರೆಯುತ್ತಾರೆ. ಈ ಅರಮನೆಯು ಅರಸನ ಕೇಂದ್ರಸ್ಥಾನ. ಸೀಮೆಗೆ ಸಂಬಂಧಿಸಿದ ಆಡಳಿತಾತ್ಮಕ ಕೆಲಸಗಳು ನಿಯುಕ್ತಿಗೊಳ್ಳುವುದು ಈ ಅರಮನೆಯ ಮೂಲಕವೇ ಆಗಿದೆ.

ಅರಮನೆಯ ಪರಿಕಲ್ಪನೆಯು ತುಳುನಾಡಿನ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಮಹತ್ವದ ಪಾತ್ರವಹಿಸುವ ಒಂದು ಅಂಗವಾಗಿದೆ. ರಾಜಕೀಯವಾಗಿ ಅರಸನ ಪ್ರಬಲತೆಯನ್ನು ಸಾಮರ್ಥ್ಯಕ್ಕೆ ಪ್ರತಿಬಿಂಬದಂತೆ ಈ ಅರಮನೆಯ ವಾಸ್ತುಶಿಲ್ಪವಿರುತ್ತದೆ. ಇದೇ ಅರಮನೆಯಲ್ಲಿ ಅರಸನಿಗೆ ಸಂಬಂಧಿಸಿದ ಪಟ್ಟಾಭಿಷೇಕ, ಆಡಳಿತದ ಗಡಿಪ್ರದಾನ ಮೊದಲಾದ ಮುಖ್ಯ ಕಾರ್ಯಗಳು ನಡೆಯುತ್ತವೆ. ಅರಸನ ಬಿರುದುಬಾವಲಿಗಳು, ಅರಮನೆಯ ವಾಸ್ತುಶಿಲ್ಪ ಇವೆಲ್ಲವೂ ಅರಸನನ್ನು ಸಾಮಾಜಿಕವಾಗಿಯೂ ಉನ್ನತ ಸ್ಥಾನದಲ್ಲಿ ನೆಲೆಗೊಳಿಸಿತ್ತು. ಈ ಅರಸನೇ ಆ ಸೀಮೆಗೆ ಉನ್ನತ ಅಧಿಕಾರಿ. ಆ ಉನ್ನತಿಕೆಯನ್ನು ಸೂಚಿಸುವ ಇತರ ಅಂಶಗಳೆಂದರೆ ಪಲ್ಲಕ್ಕಿ, ಬಿರುದು ಬಾವಲಿಗಳು, ಅರಮನೆ, ಇತ್ಯಾದಿಗಳು.

ಈ ಅರಸನು ಸಮಾಜದ ಜೊತೆಗಿನ ಸಂಬಂಧವು ಒಡೆಯ–ಆಳು ಸ್ವರೂಪದಲ್ಲಿ ಕಾಣಬಹುದು. ಊಳಿಗಮಾನ್ಯ ವ್ಯವಸ್ಥೆಯ ಮೇಲ್‌ಸ್ತರದ ಅಧಿಕಾರವು ಈ ಅರಸನ ಕೈಯಲ್ಲಿತ್ತು. ಹಾಗಾಗಿ ಅರಸನಿಗಿರುವ

ಎಲ್ಲಾ ಸವಲತ್ತುಗಳು ಅವನ ಸ್ಥಾನಮಾನ, ಅಧಿಕಾರವನ್ನು ಪ್ರತಿಬಿಂಬಿಸುವವುಗಳಾಗಿದ್ದುವು.

ತುಳುನಾಡನ್ನು ಆಳಿದ ಈ ತುಂಡರಸರ ಅರಮನೆಗಳ ಉಲ್ಲೇಖವು ಪ್ರಾಚೀನ ದಾಖಲೆಗಳಲ್ಲಿ ಲಭ್ಯ ಇವೆ. ಅಜಿಲ ಅರಸರ ಅರಮನೆಯು ಅಳುವದಲ್ಲಿದೆ. ಬಂಗರಸರ ಅರಮನೆಯು ಬಂಗಾಡಿ, ನಂದಾವರ ಮತ್ತು ಮಂಗಳೂರಿನಲ್ಲಿತ್ತು. ಅದೇ ರೀತಿಯಲ್ಲಿ ಚೌಟರಸರ ಅರಮನೆಯು ಪುತ್ತಿಗೆ ಮತ್ತು ಉಳ್ಳಾಲದಲ್ಲಿತ್ತು. ಹೀಗೆ ಸೀಮೆಯ ಒಳಗೆ ತಮ್ಮ ಆಡಳಿತಕ್ಕೆ ಅನುಕೂಲವೆನ್ನಿಸುವ ಸ್ಥಳಗಳಲ್ಲಿ ಅರಮನೆಯನ್ನು ಕಟ್ಟಿಸಿರುವಂತೆ ತೋರುತ್ತದೆ. ಇಂಥ ಅರಮನೆಗಳು ಕೆಲವೊಮ್ಮೆ ಅನ್ಯರ ಆಕ್ರಮಣಗಳಿಗೂ ಒಳಗಾಗಿರುವ ಉದಾಹರಣೆಗಳು ಉಂಟು.

ಈ ಅರಸರೆಲ್ಲ ಬಹುವಾಗಿ ಜೈನಮತಕ್ಕೆ ಸೇರಿದವರಾಗಿದ್ದರು. ಹಾಗಿದ್ದೂ ಇವರು ತುಳುನಾಡಿನ ಸ್ಥಳೀಯ ಆರಾಧನೆಯಾಗಿದ್ದ ದೈವಾರಾಧನೆ, ಕಂಬಳ ಮೊದಲಾದುಗಳಲ್ಲಿ ಭಾಗವಹಿಸುತ್ತಿದ್ದರು. ಅನೇಕ ಅರಮನೆಗಳಲ್ಲಿ, ಅಲ್ಲಿಯ ಚಾವಡಿಯಲ್ಲಿ ರಾಜನ್ ದೈವಗಳ ಆರಾಧನೆಗೆ ಪ್ರಾಶಸ್ತ್ಯವಿತ್ತು ಎನ್ನುವುದಕ್ಕೆ ಮೌಖಿಕ ಮತ್ತು ಲಿಖಿತ ದಾಖಲೆಗಳು ದೊರೆಯುತ್ತವೆ. ವೇಣೂರಿನ ಅಜಿಲ ಸೀಮೆಯಲ್ಲಿ ಇವತ್ತಿಗೂ ದೈವಾರಾಧನೆಗೆ ಸಂಬಂಧಿದ ಚಾಕರಿಯನ್ನು ನಿರ್ವಹಿಸುವ ವ್ಯಕ್ತಿಗಳಿಗೆ ಗಡಿ, ಎಣ್ಣೆ, ಪಟ್ಟಿ ಕೊಡುವ ಸಂಪ್ರದಾಯವು ಇದೆ. ಈ ಗಡಿ, ಎಣ್ಣೆ, ಪಟ್ಟಿ ನೀಡುವ ಅಧಿಕಾರವು ಅರಸರಿಗೆ ಸಂಬಂಧಿಸಿದ್ದಾಗಿದೆ. ಅರಸರು ತಮ್ಮ ಸೀಮೆಗೆ ಸಂಬಂಧಿಸಿದ ಪ್ರಧಾನ ದೈವಾರಾಧನೆಯ ಸ್ಥಳಗಳಿಗೆ ವಿಶೇಷ ಗೌರವದೊಂದಿಗೆ ಹೋಗುವ ಕ್ರಮವೂ ಇದೆ. ಸೀಮೆಯ ಅರಸನಿಗೆ ದೈವವು ನೀಡುವ ಗೌರವ ಮೊದಲ ಸ್ಥಾನದ್ದಾಗಿರುತ್ತದೆ. ಅದೇ ರೀತಿಯಲ್ಲಿ ತುಳುನಾಡಿನ ಬೇರೆ ಬೇರೆ ಸೀಮೆಗಳಲ್ಲಿ ರಾಜನ್ ದೈವಗಳ ಆರಾಧನೆಯನ್ನು ಕಾಣಬಹುದಾಗಿದೆ.

**ಅರಂತಡೆ**

ಅರಂತಡೆ ಎಂದರೆ ಅರಮನೆ, ರಾಜಗೃಹ ಎಂದು ಸಾಮಾನ್ಯ ಅರ್ಥವನ್ನು ನಿಘಂಟು ನೀಡುತ್ತದೆ. ಅರಂತಡೆ ಎನ್ನುವುದು ಅರಮನೆಗೆ ಸಮಾನಾಂತರವಾಗಿ ಬಳಸಲಾಗಿದೆ. ಆದರೆ ಈ ಕುರಿತು ವಿಚಾರ ಮಾಡಿದರೆ ಇದು ಅರಮನೆಯ ಕಲ್ಪನೆಯಾಗಿದ್ದರೂ ಪೂರ್ಣ ಪ್ರಮಾಣದ ಅರಮನೆ ಅಲ್ಲವೆಂದು ವಿಧಿತವಾಗುತ್ತದೆ. ಅರಂತಡೆ ಎಂದರೆ ಅರಮನೆಗಿಂತ ಸಣ್ಣ ಮಟ್ಟದ ಮನೆಯಾಗಿತ್ತು ಎಂದು ತಿಳಿದುಬರುತ್ತದೆ. ಅರಂತಡೆಯಲ್ಲಿ ಸಾಮಂತರಸನ ಕೈಕೆಳಗಿನ ಅಧಿಕಾರಿ ವರ್ಗವು ವಾಸಮಾಡಿರುವ ಸಾಧ್ಯತೆ ಇದೆ.

ಕನಪಾಡಿತ್ತಾಯ ಎನ್ನುವ ದೈವದ ನುಡಿಗಟ್ಟಿನಲ್ಲಿ ಈಗಲೂ ಈ ಅರಂತಡೆಯ ಹೆಸರನ್ನು ಕರೆಯುವ ರೂಢಿ ಇದೆ. 'ಪಲ್ಲಮಜಲ ಅರಂತಡೆ' ಎನ್ನುತ್ತದೆ ದೈವ. ಹಾಗಾಗಿ ಪಲ್ಲಮಜಲು ಎನ್ನುವ ಪ್ರದೇಶದಲ್ಲಿ ಇದ್ದ ಸಣ್ಣಪ್ರಮಾಣದ ಅರಮನೆಯನ್ನೇ ಹೀಗೆ ಕರೆದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಕನಪಾಡಿತ್ತಾಯ ದೈವವು ತನ್ನ ವೀರವನ್ನು ಹೇಳುವ ನುಡಿಗಟ್ಟಿನಲ್ಲಿ ಈ ಅರಂತಡೆಗೆ ಸಂಬಂಧಿಸಿ ಒಂದು ಕಥೆಯನ್ನು ಹೇಳುತ್ತದೆ. ಪಲ್ಲಮಜಲು ಎನ್ನುವ ಅರಂತಡೆಯಲ್ಲಿ ತಿಮ್ಮ ಮೊಕಾಲ್ಯ ಎನ್ನುವ ಒಬ್ಬ ಜಮೀನ್ದಾರ ಇದ್ದ. ಈತ ಈ ಪ್ರದೇಶದ ಜನರಿಂದ ತೆರಿಗೆಯ ರೂಪದಲ್ಲಿ ಭತ್ತವನ್ನು ಸಂಗ್ರಹಿಸಿ ಮಂಗಳೂರು ಒಡೆಯರಿಗೆ ದೋಣಿಯ ಮೂಲಕ ಸಾಗಿಸುತ್ತಿದ್ದ. ಜನರು ತಾವು ಬೆಳೆದ ಭತ್ತದಲ್ಲಿ ಮುಕ್ಕಾಲು ಪಾಲು ತೆರಿಗೆ ರೂಪದಲ್ಲಿ ನೀಡಬೇಕಾಗಿತ್ತು. ತೆರಿಗೆಯನ್ನು ಕೊಡಲು ಸಾಧ್ಯವಿಲ್ಲದಿದ್ದರೆ ಅಂತವರಿಂದ ಬಲಾತ್ಕಾರವಾಗಿ ತೆರಿಗೆ ಸಂಗ್ರಹಿಸುತ್ತಿದ್ದ ಈ ತಿಮ್ಮ ಮೊಕಾಲ್ಯ. ಈ ತಿಮ್ಮ ಮೊಕಾಲ್ಯ ಉಪಟಲ ತಾಳಲಾರದೆ ಜನರು ದೈವದ ಮೊರೆ ಹೋಗುತ್ತಾರೆ. ಅಂಥ ಸಂದರ್ಭದಲ್ಲಿ ದೈವವು ಹಂದಿಯ ರೂಪದಲ್ಲಿ ಬಂದು ಆ ತಿಮ್ಮ

ಮೊಕಾಲ್ಯನನ್ನು ನಾಶಮಾಡಿದ ಕಥೆಯನ್ನು ದೈವವು ಹೇಳುತ್ತದೆ.

ಈ ಮೇಲಿನ ಉಲ್ಲೇಖವು ಅರಂತಡೆಯು ಒಬ್ಬ ಅಧಿಕಾರಿಯ ನೆಲೆಯಾಗಿತ್ತು ಎನ್ನುವುದಕ್ಕೆ ಆಧಾರವಾಗಿದೆ.

**ಬೀಡು**

ತುಳುನಾಡಿನ ಸಾಮಂತ ಅರಸರ ಕೆಳಗಿನ ಅಧಿಕಾರಿ ವರ್ಗವನ್ನು ಬಲ್ಲಾಳರು ಅಥವಾ ಹೆಗ್ಗಡೆಯವರೆಂದು ಕರೆಯುತ್ತಾರೆ. ಈ ಜೈನ ಬಲ್ಲಾಳ ಅಥವಾ ಹೆಗ್ಗಡೆಯವರ ವಾಸದ ಸ್ಥಾನವನ್ನು ಬೀಡು ಎಂದೂ, ತುಳುವಿನಲ್ಲಿ ಬೂಡು ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಊಳಿಗಮಾನ್ಯ ಜಾತಿಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಬೀಡುಗಳು ಕುಲೀನ ವರ್ಗದವರಾದ ಜೈನ ಮತಾವಲಂಭಿಗಳಿಗೆ ಸೇರಿದ್ದಾಗಿತ್ತು. ಈ ಬೀಡುಗಳಲ್ಲಿದ್ದ ಬಲ್ಲಾಳರು ಅಧಿಕಾರದ ಸ್ಥಾನದಲ್ಲಿ ಅರಸನಿಗಿಂತ ಕೆಳಗಿನ ವರ್ಗವನ್ನು ಪ್ರತಿನಿಧಿಸುತ್ತಿದ್ದರು. ಸಾಮಂತರಸರು ಸೀಮೆಗೆ ಅಧಿಪತಿಗಳಾಗಿದ್ದರೆ, ಈ ಬೀಡು ಬಲ್ಲಾಳರು ಮಾಗಣೆಯ ಅಧಿಪತ್ಯವನ್ನು ವಹಿಸಿದ್ದರು. ಮಾಗಣೆ ಎಂದರೆ ಮೂರು ಅಥವಾ ನಾಲ್ಕು ಗ್ರಾಮಗಳ ಕೂಟ. ಕೆಲವು ಸಂದರ್ಭಗಳಲ್ಲಿ ಮೂರು ಗ್ರಾಮ ಸೇರಿ ಒಂದು ಮಾಗಣೆ ಎಂದೂ, ನಾಲ್ಕೈದು ಗ್ರಾಮಗಳು ಸೇರಿದ ಕೂಟಕ್ಕೆ ಒಂದು ಮಾಗಣೆ ಎಂದೂ ಗುರುತಿಸಲಾಗುತ್ತದೆ. ಈ ಮಾಗಣೆಯನ್ನು ಆಳ್ವಿಕೆ ನಡೆಸುತ್ತಿದ್ದವ ಬಲ್ಲಾಳ.

ಈ ಮಾಗಣೆ ಬಲ್ಲಾಳನಿಗೆ ಪಟ್ಟವಾಗುವ ಕ್ರಮವು ಸಾಮಂತರಸನ ಕ್ರಮದಂತೆಯೇ ಆಗಿದೆ. ಮಾಗಣೆಯ ಪ್ರಮುಖ ನಾಲ್ಕು ಗುತ್ತು ಮನೆತನದ ಗುರಿಕಾರರ ಉಪಸ್ಥಿತಿಯಲ್ಲಿ ಪಟ್ಟವೇರುವ ಪ್ರಕ್ರಿಯೆಯು ನಡೆಯುತ್ತಿತ್ತು. ಬಲ್ಲಾಳನಿಗೆ ಪಟ್ಟವಾಗುವ ಸಂದರ್ಭದಲ್ಲಿ ಮಾಗಣೆಯ ಮೊದಲನೆಯ ಗುತ್ತಿನ ಗುರಿಕಾರನು ಬಲ್ಲಾಳನನ್ನು ಪಟ್ಟದ ಪೀಠದಲ್ಲಿ ಕೂರಿಸುವ ಅಧಿಕಾರವನ್ನೂ, ಮತ್ತೊಬ್ಬ ಗುರಿಕಾರನು ಬಲ್ಲಾಳನ ಕೈಗೆ ಪಟ್ಟದ ಕತ್ತಿಯನ್ನು ನೀಡುವ ಅಧಿಕಾರವನ್ನು ಹೊಂದಿದ್ದನು. ಮೂರನೆಯ ಪ್ರಮುಖ ಗುತ್ತಿನವನು ಬಲ್ಲಾಳನ ಕೈಗೆ ಉಂಗುರ ತೊಡಿಸುವ ಗೌರವವನ್ನು ಹೊಂದಿದ್ದರೆ, ಮಗದೊಬ್ಬ ಗುರಿಕಾರನು ಬಲ್ಲಾಳ ಪಟ್ಟದ ಹೆಸರನ್ನು ಕರೆಯುವ ಅಧಿಕಾರವನ್ನು ಹೊಂದಿದ್ದನು. ಹೀಗೆ ಮಾಗಣೆ ಸಮಸ್ತರ ಸಮಕ್ಷಮದಲ್ಲಿ ಮಾಗಣೆ ಬಲ್ಲಾಳನ ಪಟ್ಟಾಭಿಷೇಕ ವಿಧಾನವು ನಡೆಯುತ್ತಿತ್ತು. ಹೀಗೆ ಬೀಡಿನ ಬಲ್ಲಾಳರ ಜೊತೆಗೆ ಮಾಗಣೆಯ ಪ್ರಧಾನ ನಾಲ್ಕುಗುತ್ತುಗಳ ಪ್ರಮುಖರ ಭಾಗವಹಿಸುವಿಕೆ ಇತ್ತು. ಈ ಮೂಲಕ ಬೀಡು ಮತ್ತು ಗುತ್ತುಗಳ ಸಂಬಂಧವು ವಿಶ್ವಾಸಯುತವಾಗಿ ಇರುವುದಕ್ಕೆ ಸಾಧ್ಯವಾಯಿತು.

ಬೀಡು ಎಂದರೆ ಬಲ್ಲಾಳರ ನಿವಾಸ. ಸಾಮಾನ್ಯವಾಗಿ ಸುತ್ತು ಪೌಳಿ ರೂಪದಲ್ಲಿದ್ದು, ಸಾಮಾನ್ಯ ಮನೆಗಿಂತ ವ್ಯಾಪ್ತಿಯಲ್ಲಿ ವಿಸ್ತಾರವಾಗಿರುತ್ತದೆ. ಬೀಡು ಪ್ರವೇಶವಾಗುವಾಗ ದೊಡ್ಡ ಮೊಗಸಾಲೆ, ಸುತ್ತುಪಡಿಪ್ಪಿರೆ ಮನೆಯಾಗಿದ್ದು, ಆಕರ್ಷಕ ಕೆತ್ತನೆಗಳಿಂದಲೂ ವಾಸ್ತುಶೈಲಿಯಿಂದಲೂ ಪ್ರತಿಷ್ಠಿತ ವಾಗಿರುತ್ತದೆ. ಈ ಬೀಡಿನ ಒಳಭಾಗದ ಚಾವಡಿಯಲ್ಲಿ ರಾಜನ್ ದೈವದ ಉಜ್ಚಾಲ್ ಇರುತ್ತದೆ.

ಈ ಬಲ್ಲಾಳರು ಮಾಗಣೆಗೆ ಸಂಬಂಧಿಸಿದ ನ್ಯಾಯ, ಆಡಳಿತವನ್ನು ನೋಡಿಕೊಳ್ಳುವವರಾಗಿದ್ದರು.

ಬೀಡುಗಳ ಮುಖ್ಯಸ್ಥರಾಗಿದ್ದ ಈ ಬಲ್ಲಾಳರು ಮಾಗಣೆಯ ಆಡಳಿತದ ಜೊತೆಯಲ್ಲಿ ಸಾಮಂತ ಅರಸರ ಸೇನಾಧಿಪತಿಗಳಾಗಿಯೂ ಇದ್ದರು. ಸೀಮೆಯ ಮೇಲೆ ಅನ್ಯರಿಂದ ಆಕ್ರಮಣ ನಡೆಯುವ ಸಂದರ್ಭದಲ್ಲಿ ತಮ್ಮ ಆಳುಗಳೊಂದಿಗೆ ಸಾಮಂತ ಅರಸರ ನೆರವಿಗೆ ಹೋಗುತ್ತಿದ್ದರು. ಮಾಗಣೆಯ ವ್ಯಾಪ್ತಿಯ ರಕ್ಷಣೆಗೂ ಈ ಬಲ್ಲಾಳರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಬಲವನ್ನು ಹೊಂದಿರುತ್ತಿದ್ದರು. ಹಾಗಾಗಿಯೇ ಈ ಬಲ್ಲಾಳರ ಬಲವನ್ನು ತುಳುವಿನಲ್ಲಿ ಗೌರವದ ಕಾರಣಕ್ಕೆ ಹೇಳುವುದು ಇದೆ. ನೂರ್ದಾಲ ಪಟ್ಟ ಎಂದರೆ

ನೂರು ಆಳುಗಳನ್ನು ಹೊಂದಿರುವವ; ನಾನ್ನೂರಾಳ ಪಟ್ಟ ಎಂದರೆ ನಾಲ್ಕುನೂರು ಆಳುಗಳನ್ನು ಹೊಂದಿರುವವ; ಐಂದಾಳ ಪಟ್ಟ ಎಂದರೆ ಐದುನೂರು ಆಳುಗಳನ್ನು ಹೊಂದಿರುವವ; ಸಾರಾಳ ಪಟ್ಟ ಎಂದರೆ ಸಾವಿರ ಆಳುಗಳನ್ನು ಹೊಂದಿರುವ ಬಲ್ಲಾಳ ಅಥವಾ ಸೇನಾಧಿಪತಿಯಾಗಿದ್ದಾನೆ. ಸೇನಾಧಿಪತಿಯ ಸಾಮರ್ಥ್ಯವು ಈ ಆಳುಗಳನ್ನು ಹೊಂದಿರುವ ಸಂಖ್ಯೆಯ ಮೇಲೆ ನಿರ್ಣಯಿಸಲ್ಪಟ್ಟಿತ್ತು.

ಈ ಬೀಡುಗಳ ಬಲ್ಲಾಳರಿಗೂ ರಾಜನ್ ದೈವಗಳಿಗೂ ಸಂಬಂಧವಿದೆ. ಬಲ್ಲಾಳರು ತಮ್ಮ ಅಧಿಕಾರ, ಪ್ರಭಾವಕ್ಕೆ ಅನುಗುಣವಾಗಿ ರಾಜನ್ ದೈವಗಳನ್ನು ತನ್ನ ಮಾಗಣೆ ವ್ಯಾಪ್ತಿಯಲ್ಲಿ ನಂಬಿ ಅದಕ್ಕೆ ರಾಜವೈಭೋಗದಲ್ಲಿ ನೇಮನೆರಿಯನ್ನು ನೀಡಿದ ವಿವರಗಳು ಪಾಡ್ದನಗಳಲ್ಲಿ ಇವೆ. ಪಂಜುರ್ಲಿ, ಕೊಡಮಂದಾಯ, ಕನಪಾಡಿತ್ತಾಯ, ಪುಲಂದಾಯ, ಮಗ್ರಂದಾಯ ಇತ್ಯಾದಿ ರಾಜನ್ ದೈವಗಳ ಪಾಡ್ದನಗಳಲ್ಲಿ ಈ ಬೀಡು ಬಲ್ಲಾಳರ ವಿಸ್ತಾರವಾದ ಕಥನಗಳು ದಾಖಲುಗೊಂಡಿವೆ.

ಸಾಮಾಜಿಕವಾಗಿ ಜಾತಿಶ್ರೇಣಿಕರಣದ ವ್ಯವಸ್ಥೆಯೊಳಗೆ ಬೀಡಿನ ಅಧಿಕಾರವು ಜೈನ ಬಲ್ಲಾಳ ಅಥವಾ ಹೆಗ್ಗಡೆಯವರ ಕೈಯಲ್ಲಿ ಇತ್ತು. ಆದರೆ ಜೈನ ಮತಸ್ಥರೇ ಈ ಬೀಡಿನ ಯಜಮಾನರಾಗಿದ್ದರೇ? ಎನ್ನುವ ಪ್ರಶ್ನೆ ಮುಖ್ಯವಾಗಿ ಕಾಣುತ್ತದೆ. ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕೆಲವೊಂದು ಬೀಡುಗಳು ಬಂಟ, ಬಿಲ್ಲವ ಜಾತಿಯವರ ಆಡಳಿತದಲ್ಲಿರುವುದು ಕಂಡುಬರುತ್ತದೆ. ಬಹುಶಃ ಈ ಕುರಿತು ವಿಚಾರ ನಡೆಸಿದರೆ, ಸಾಮಾಜಿಕವಾಗಿ ಮತ್ತು ಚಾರಿತ್ರಿಕವಾಗಿ ಸಂಭವಿಸಿದ ಘಟನೆಗಳ ಕಾರಣವಾಗಿ ಈ ಬೀಡಿನ ಒಡೆತನವು ಬಂಟ ಬಿಲ್ಲವ ಜಾತಿಗೆ ಪಲ್ಲಟಗೊಂಡಿರಬಹುದು. ಈ ಕುರಿತು ವಕ್ತೃಗಳು ನೀಡುವ ಮಾಹಿತಿಯು ನಮ್ಮ ಊಹೆಗೆ ಸಮರ್ಥನೆಯನ್ನು ಒದಗಿಸುತ್ತವೆ.

**ಗುತ್ತು**

ತುಳುನಾಡಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಗುತ್ತು ಎನ್ನುವುದು ಪ್ರತಿಷ್ಠೆಯ ಸಂಕೇತವಾಗಿಯೂ, ಭವ್ಯ ಪರಂಪರೆಯ ಪ್ರತೀಕವೆಂದೂ ಬಿಂಬಿತಗೊಳ್ಳುತ್ತಿವೆ. ತುಳು ನಾಡಿನ ಇತರ ಆಡಳಿತ ಘಟಕಗಳಾಗಿರುವ ಬೀಡು, ಅರಂತಡೆ, ಬಾಮ, ಪರಾರಿ ಇತ್ಯಾದಿಗಳಿಗಿಂತ ಗುತ್ತು ಎನ್ನುವ ಆಡಳಿತ ಘಟಕವೇ ಹೆಚ್ಚು ಮೇಲ್ಮುಖವಾಗಿ ಕಾಣಲು ಕಾರಣವೇನು? ಆದಾಗ್ಯೂ ಗುತ್ತು ಎಂದರೇನು? ಅದರ ಸ್ವರೂಪದ ಕುರಿತ ಚಿಂತನವು ಅನೇಕ ಸಂಗತಿಗಳನ್ನು ವಿಶದಗೊಳಿಸಬಹುದು.

ಗುತ್ತು ಎಂದರೆ ಗುರುತು. ಅದೊಂದು ಐಡೆಂಟಿಟಿ. ಗುತ್ತಿಗೆಯವನ ವಾಸದ ಕೇಂದ್ರ ಎನ್ನುವ ಅರ್ಥಗಳಲ್ಲಿ ಬಳಸಬಹುದು. ಇತಿಹಾಸಕಾರ ಗುರುರಾಜ್ ಭಟ್ ಗುತ್ತನ್ನು 'ಆಸ್ತಿಗಳಿಂದ ಸುತ್ತುವರಿದ ಮತ್ತು ನಿಶ್ಚಿತ ವಿಶೇಷಾಧಿಕಾರವನ್ನು ಅನುಭೋಗಿಸುವ ಜಹಗೀರು ಮನೆ' ಎಂದು ಹೇಳುತ್ತಾರೆ. ಗುತ್ತೇದಾರನು ಜಹಗೀರನ್ನು ಹೊಂದಿದವನಾದ್ದರಿಂದ ರಾಜನ ಬೊಕ್ಕಸಕ್ಕೆ ಕರಾರು ಪ್ರಕಾರ ಅಥವಾ ಗುತ್ತಿಗೆ ಪದ್ದತಿ ಪ್ರಕಾರ ಗೊತ್ತುಪಡಿಸಿದ ಕಂದಾಯ ಕೊಡುವ ಜವಾಬ್ದಾರಿ ಹೊಂದಿದ ವ್ಯಕ್ತಿಯಾಗಿದ್ದಾನೆ. ತನ್ನ ಗುತ್ತಿಗೆ ದಣಿಗೆ ಯುದ್ದಸಮಯದಲ್ಲಿ ನೆರವಾಗಲು ಗುತ್ತೇದಾರನು ಕಡ್ಡಾಯವಾಗಿ ಕಾಲಾಳುಗಳನ್ನು ಸೇರ್ಪಡೆಗೊಳಿಸಬೇಕಾಗಿತ್ತು. ಸಹಜವಾಗಿ ಗುತ್ತಿನ ಮುಖ್ಯಸ್ಥರು ಸೇನಾಧಿಪತಿಗಳು ಎಂಬ ಕಲ್ಪನೆ ಬರಲು ಇದು ಕಾರಣವಾಯಿತು. ಈ ಗುತ್ತು ಆಡಳಿತ ಘಟಕವು ಮಧ್ಯಯುಗದ ಊಳಿಗಮಾನ್ಯ ಪದ್ದತಿಯ ಪ್ರತೀಕವಾಗಿ ಕಾಣಬಹುದು.

ಮಧ್ಯಯುಗೀನ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಮಟ್ಟದ ಆಡಳಿತದ ಹೊಣೆಯನ್ನು ಈ ಗುತ್ತುಗಳಿಗೆ ನೀಡಲಾಗಿತ್ತು. ಅದಕ್ಕಾಗಿ ಗ್ರಾಮದಲ್ಲಿ ನಾಲ್ಕುಮಂದಿ ಮುಖ್ಯಸ್ಥರನ್ನು ಗುರಿಕಾರರನ್ನು ನೇಮಿಸಲಾಗಿತ್ತು. ಗ್ರಾಮವನ್ನು ನಾಲ್ಕು ತುಂಡು ಮಾಡಿ ಒಂದೊಂದು ಭಾಗದ ಕಂದಾಯ ಸಂಗ್ರಹ ,ಆಡಳಿತವನ್ನು

ನೋಡಿಕೊಳ್ಳಲು ಒಬ್ಬೊಬ್ಬ ಗುರಿಕಾರನಿಗೆ ಗಡಿ ಎಳೆದು ನೀಡಲಾಗಿತ್ತು. ಹೀಗೆ ಗಡಿ ಎಳೆದು ಹಂಚಿದ ಭೂಭಾಗದ ಗುರಿಕಾರನನ್ನು ಗುತ್ತಿನ ಗುರಿಕಾರನೆಂದು ಕರೆಯುತ್ತಿದ್ದರು.

ಇಲ್ಲಿ ಗುತ್ತಿನವನಿಗೆ ಭೂ ಒಡೆತನ, ಆರ್ಥಿಕತೆಯ ಮೂಲಕ ಅಧಿಕಾರ ದೊರೆಯಿತು. ಇದು ಮಧ್ಯಕಾಲೀನ ಊಳಿಗಮಾನ್ಯ ಪದ್ಧತಿಯ ಗ್ರಾಮ ಮಟ್ಟದ ಆಡಳಿತ ಘಟಕ.

ಈ ಗುತ್ತುಗಳ ಅಧಿಕಾರವು ಸಾಮಾನ್ಯವಾಗಿ ಇಂತಹದ್ದೇ ಜಾತಿಗೆ ಸೀಮಿತವಾಗಿರಲಿಲ್ಲ. ಬಹುವಾಗಿ ಆರ್ಥಿಕವಾಗಿ ಸದೃಢವಾಗಿರುವ ಬಂಟ ಸಮಾಜದಲ್ಲಿ ಈ ಗುತ್ತುಗಳು ಕಂಡು ಬರುತ್ತವೆ. ಈ ಕುರಿತು ಅಧ್ಯಯನ ನಡೆಸಿರುವ ಗ್ರಂಥಗಳೂ ಇದನ್ನೇ ಹೇಳಿವೆ. ಆದರೆ ಗುತ್ತು ಜಾತಿನೆಲೆಯ ಅಧಿಕಾರ ಘಟಕವಾಗಿರಲಿಲ್ಲ. ಬಂಟ, ಬಿಲ್ಲವ, ಕುಲಾಲ, ಬ್ರಾಹ್ಮಣ, ಮೊದಲಾದ ಜಾತಿ ಸಮುದಾಯಗಳೂ ಗುತ್ತಿನ ಗುರಿಕಾರರಾಗಿದ್ದರು ಎನ್ನುವುದು ತಿಳಿದುಬರುತ್ತದೆ. ಆದರೆ ಆಧುನಿಕ ಕಾಲದಲ್ಲಿ ನಡೆದ ಔದ್ಯೋಗಿಕ ಮತ್ತು ಆರ್ಥಿಕ ಸಬಲತೆಯು ಬಂಟ ಸಮುದಾಯಕ್ಕೆ ಪೋಷಕವಾಗಿ ದೊರೆಯಿತು. ಆ ಸಮುದಾಯದ ಪ್ರತಿಷ್ಠೆಯ ಸಂಕೇತವಾಗಿ ಈ ಗುತ್ತುಗಳನ್ನು ಮರುಕಟ್ಟುವ ಸಂಕಥನಗಳಾಗಿ ಇಂದು ಗೋಚರಿಸುತ್ತವೆ. ಉಳಿದಂತೆ ಇನ್ನುಳಿದ ಸಮುದಾಯಗಳ ಗುತ್ತುಗಳ ಕುರಿತ ಗುರುತು ಚರಿತ್ರೆಯ ಪುಟಕ್ಕೆ ಸೇರಿಕೊಂಡು ಬಿಟ್ಟಿತು ಎನ್ನಬಹುದು.

**ಚಾವಡಿ**

ತುಳು ಪಾಡ್ದನಗಳಲ್ಲಿ ಚಾವಡಿ, ಧರ್ಮಚಾವಡಿ ಎನ್ನುವ ಉಲ್ಲೇಖವು ದೊರೆಯುತ್ತದೆ. ಚಾವಡಿ ಎನ್ನುವುದು ಮಧ್ಯಕಾಲೀನ ಆಡಳಿತ ಘಟಕವಾಗಿ ಮುಖ್ಯವಾಗುವುದು ಅದೊಂದು ನ್ಯಾಯ ತೀರ್ಮಾನದ ಸ್ಥಳವೆಂಬ ಕಾರಣದಿಂದ. ಬೀಡು ಗುತ್ತು ಮನೆತನಗಳ ಮನೆಯೊಳಗಿನ ವಿಶಾಲವಾದ ಅಂತಸ್ತನ್ನು ಚಾವಡಿ ಎನ್ನುತ್ತಾರೆ. ಆದರೆ ಚಾವಡಿ ಎನ್ನುವುದು ಕೇವಲ ನ್ಯಾಯ ತೀರ್ಮಾನದ ಮನೆ ಎನ್ನುವುದು ಮಾತ್ರವಲ್ಲ. ಚಾವಡಿಯು ಮಧ್ಯಕಾಲೀನ ಊಳಿಗಮಾನ್ಯ ವ್ಯವಸ್ಥೆಯ ಅತೀಮುಖ್ಯ ಘಟಕವಾಗಿಯೂ ಮಹತ್ವವನ್ನು ಪಡೆಯುತ್ತದೆ. ಕನಪಾಡಿತ್ತಾಯ ದೈವದ ನುಡಿಗಟ್ಟಿನಲ್ಲಿ "ಕುಪ್ಪಿಲದ ಚಾವಡಿಡ್ ಮಧುಪುದ್ವಾರ್ ನೇಮ' ಎನ್ನುವ ಮಾತು ಬರುತ್ತದೆ. ಇಲ್ಲಿ ಚಾವಡಿ ಎನ್ನುವುದು ಒಂದು ಮನೆತನವೆಂಬ ಅರ್ಥವು ಬರುತ್ತದೆ.

ಹಾಗಾಗಿ ಚಾವಡಿ ಎನ್ನುವುದು ಗುರಿಕಾರರು ಪಾಲ್ಗೊಂಡು ನ್ಯಾಯ ತೀರ್ಮಾಣ ನಡೆಸುವ ಹತ್ತು ಸಮಸ್ತರು ಸೇರುವ ಸ್ಥಳ. ಈ ಚಾವಡಿಯಲ್ಲಿ ದೈವದ ಉಜ್ಜಾಲ್ ಸಹ ಇರುತ್ತದೆ. ಚಾವಡಿಯ ಕುರಿತು ಬಿ.ಸರೇಂದ್ರ ರಾವ್ ಅವರು ಹೇಳುವಂತೆ "ಸ್ಥಳೀಯ ವಿವಾದಗಳ ತೀರ್ಮಾನಕ್ಕಿದ್ದ ಸಮಿತಿ ಅಥವಾ ಸ್ಥಳೀಯ ವಿಷಯಗಳಲ್ಲಿ ಏಕಾಭಿಪ್ರಾಯ ರೂಪಿಸುವ ಮಂಡಲಿ" ಆಗಿದೆ.

**ಬಾವ**

ತುಳುನಾಡಿನ ಜೈನ ಬಲ್ಲಾಳ/ಹೆಗಡೆಯವರ ಆಡಳಿತದ ಸಂದರ್ಭದಲ್ಲಿ ಬೂಡುವಿನ ಕೆಳಗಿನ ಕೆಲವು ಮನೆತನಗಳನ್ನು ಬಾವ ಎಂದು ಕರೆದಿರುವುದನ್ನು ಕಾಣುತ್ತೇವೆ. ಬಾವದ ಮನೆತನ ಎನ್ನುವುದು ತುಳುನಾಡಿನ ಪ್ರತಿಷ್ಠಿತ ಮನೆತನಕ್ಕೆ ಇದ್ದ ಹೆಸರಾಗಿದೆ. ಗುತ್ತಿನ ಮರ್ಯಾದೆಯಲ್ಲಿ ನಾಲ್ಕು ಮನೆಗಳಲ್ಲಿ ಮೊದಲ ಎರಡು ಮನೆಗಳನ್ನು 'ಬಾವ'ದ ಮನೆಗಳೆಂದು ಕರೆಯುತ್ತಿದ್ದರು. 'ಬಾವ' ಎನ್ನುವುದು ತುಳುನಾಡಿನಲ್ಲಿ ಪ್ರತಿಷ್ಠಿತ ಮನೆತನವಾಗಿದೆ. ಐತಿಹಾಸಿಕ ಜಮೀನ್ದಾರಿ ಮನೆತನಗಳ ಹೆಸರಾಗಿದೆ.

ತುಳುನಾಡು ಎಂದು ಪರಿಭಾವಿಸುವ ವ್ಯಾಪ್ತಿಯಲ್ಲಿ ಪ್ರಾಚೀನ ಜಮೀನ್ದಾರಿ ವ್ಯವಸ್ಥೆಯನ್ನು ನೆನಪಿಸುವ ಅನೇಕ ಬೀಡು ಗುತ್ತು ಬರ್ಕೆ ಮನೆತನಗಳಿವೆ. ಈ ಮನೆತನಗಳು ಒಂದು ಕಾಲದ ಜಮೀನ್ದಾರಿ ವ್ಯವಸ್ಥೆಯ ಕುರುಹುಗಳು. ಅಂತಹ ಮನೆತನಗಳಲ್ಲಿ

ಬಾವ ಮನೆತನವೂ ಒಂದು. ಈ ಬಾವದ ಮನೆತನಗಳು ತುಳುನಾಡಿನಾದ್ಯಂತ ಕಂಡು ಬರುತ್ತವೆ. ತುಳುನಾಡಿನ ಸಾಮಾಜಿಕ ವ್ಯವಸ್ಥೆಯೊಳಗೆ ಈ ಮನೆತನಗಳು ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದವು. ಹಾಗಾಗಿ ಗ್ರಾಮಮಟ್ಟದಲ್ಲಿ ಗುತ್ತಿನ ಮೊದಲ ಮತ್ತು ಎರಡನೆಯ ಗೌರವವನ್ನು ಪಡೆಯುವ ಮನೆಗಳನ್ನು ಬಾವ ಎಂದು ಕರೆದಿರುವುದು ಇದೆ. ಈ ಬಾವದ ಮನೆತನವು ಜಮೀನ್ದಾರರಾಗಿದ್ದು ಗ್ರಾಮಕ್ಕೆ ಸಂಬಂಧಿಸಿದ ವ್ಯಾಜ್ಯ, ನ್ಯಾಯ ತೀರ್ಮಾನಗಳನ್ನು ನಡೆಸುತ್ತಿದ್ದರು. ಗ್ರಾಮಕ್ಕೆ ಸಂಬಂಧಿಸಿದ ಆಡಳಿತಾತ್ಮಕ ಕೆಲಸಗಳು, ದೈವಾರಾಧನೆಯ ಸಂದರ್ಭದ ಗೌರವಗಳಿಗೆ ಈ 'ಬಾವದ ಮನೆತನವು ಪಾತ್ರವಾಗುತ್ತಿತ್ತು.

ಮಧ್ಯಕಾಲೀನ ತುಳುನಾಡಿನಲ್ಲಿ ಜೀವಂತ ಆಡಳಿತ ಘಟಕಗಳಾಗಿ ಕಾರ್ಯನಿರ್ವಹಿಸಿದ್ದ ಈ ಗುತ್ತು, ಬಾವಗಳು ಆಧುನಿಕ ಸಂದರ್ಭದಲ್ಲಿ ತಮ್ಮ ರಾಜಕೀಯ ಅಧಿಕಾರ ಕಳೆದುಕೊಂಡವು. ಈ ಆಡಳಿತ ಘಟಕಗಳು ಪ್ರತಿನಿಧಿಸುವ ಕೇಂದ್ರಗಳಲ್ಲಿ ಆಧುನಿಕ ಪ್ರಜಾಪ್ರಭುತ್ವ ಸರ್ಕಾರವು ಬಂದಿತು. ಇದರಿಂದಾಗಿ ಪ್ರಾಚೀನ ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾಗಿರುವ ಈ ಘಟಕಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಅಮ್ಟಾಡಿ ಎನ್ನುವ ಗ್ರಾಮದ ದೈವ 'ಅಣ್ಣಪ್ಪ ಪಂಜುರ್ಲಿ' ಪಾಡ್ದನದಲ್ಲಿ ಈ ಬಾವದ ಉಲ್ಲೇಖ ಬರುತ್ತದೆ. ಆ ದೈವದ ಕಥಾನಕದಲ್ಲಿ 'ಎಲದಾರ ಬಾವ' ಮತ್ತು 'ಅಜಕ್ಕಲ ಬಾವ' ಎನ್ನುವ ಎರಡು ಮನೆತನಗಳ ಉಲ್ಲೇಖವಿದೆ. ಅದೇ ರೀತಿಯಲ್ಲಿ 'ಐಕಳ ಬಾವ' ಎನ್ನುವ ಹೆಸರೂ ದೊರೆಯುತ್ತದೆ.

**ಪರಾರಿ**

ತುಳುನಾಡಿನಲ್ಲಿ ಗುತ್ತಿನ ಮರ್ಯಾದೆಯ ಮೂರನೆಯ ಮನೆಗೆ 'ಪರಾರಿ' ಎಂದು ಕರೆಯುತ್ತಾರೆ. ತುಳುನಾಡು ಅಥವಾ ಕರಾವಳಿ ಕರ್ನಾಟಕ ಎಂದು ಕರೆಯುವ ಪ್ರದೇಶದಲ್ಲಿ 'ಪರಾರಿ' ಮನೆತನವು ಪ್ರತಿಷ್ಠಿತ ಮನೆತನವಾಗಿದೆ. ಈ ಮನೆತನವು ಕೃಷಿ ಪ್ರಧಾನವಾಗಿದ್ದು ತುಳುನಾಡಿನ ಸಂಸ್ಕೃತಿಯಲ್ಲಿ ಪರಾರಿ ಮನೆತನಕ್ಕೆ ವಿಶೇಷವಾದ ಅರ್ಥವಿದೆ. ಪರಾರಿ ಎಂದರೆ ಕೃಷಿಯನ್ನು ಪ್ರಧಾನವಾಗಿ ಹೊಂದಿರುವ ಜಮೀನ್ದಾರಿ ಮನೆತನವಾಗಿದೆ. ಪರ ಅಡಿ ಕಾಲಂತರದಲ್ಲಿ ಪರಾರಿ ಆಗಿರಬೇಕು. ಪರ ಅಡಿ ಎಂದರೆ ಕೃಷಿಯನ್ನೇ ಪ್ರಧಾನವಾಗಿ ಹೊಂದಿರುವ ಕುಟುಂಬ ಎಂಬರ್ಥವಿದೆ.

**ಬಾಳಿಕೆ(ಬರ್ಕೆ)**

ಬಾಳಿಕೆಯನ್ನು ತುಳುವಿನಲ್ಲಿ ಬರ್ಕೆ ಎಂದು ಕರೆಯುತ್ತಾರೆ. ತುಳುವಿನಲ್ಲಿ 'ಗುತ್ತು ಬರ್ಕೆದಕುಲು', 'ಬರ್ಕೆದ ಇಲ್ಲ್', ಎನ್ನುವ ರೂಢಿಯ ಮಾತಿದೆ. 'ಬಾಳಿಕೆ' ಎನ್ನುವ ಪ್ರಯೋಗವು ಕ್ವಚಿತ್ತಾಗಿ ಬಳಕೆಯಲ್ಲಿದೆ. ಬಾಳಿಕೆ ಅಥವಾ ಬರ್ಕೆ ಎನ್ನುವುದೂ ತುಳುನಾಡಿನ ಸಾಮಾಜಿಕ ರಾಜಕೀಯ ವ್ಯವಸ್ಥೆಯ ಒಳಗೆ ಪ್ರತಿಷ್ಠಿತ ಮನೆತನವಾಗಿತ್ತು. ದೈವಾರಾಧನೆಗೆ ಸಂಬಂಧಿಸಿದ ಅನೇಕ ದೈವಗಳ ಕಥಾನಕಗಳಲ್ಲಿ ಈ ಬಾರಿಕೆ ಮನೆಗಳ ಬಗ್ಗೆ ಉಲ್ಲೇಖವಿದೆ. ಕೊರಗತನಿಯ ಪಾಡ್ದನದಲ್ಲಿ ಕೊರಗತನಿಯನನ್ನು ಸಾಕಿದ ತಾಯಿ ಎಣ್ಣೂರು ಬಾಳಿಕೆಯ ಮೈರಕ್ಕೆ ಬೈದೆತಿ ಎನ್ನುವವಳು. ಬಾಳಿಕೆಯ ಮನೆಯೂ ಗುತ್ತು ಮನೆಗಳಂತೆ ಮಧ್ಯಕಾಲೀನ ತುಳುನಾಡಿನ ಆಡಳಿತ ಘಟಕಗಳಲ್ಲಿ ಒಂದಾಗಿತ್ತು.

ಬಾಳಿಕೆ ಅಥವಾ ಬರ್ಕೆ ಎನ್ನುವ ಮನೆತನದ ಸಾಂಸ್ಕೃತಿಕ ಮಹತ್ವವನ್ನು ತಿಳಿದುಕೊಳ್ಳುವುದು ಅದರ ಸ್ವರೂಪವನ್ನು ಅರಿಯುವುದಕ್ಕೆ ಸಹಾಯಕವಾದುದು. ಬಾಳಿಕೆ, ಬಾಳ್, ಬಾರಿಕೆ ಎಂದರೆ ಬೇಸಾಯದ ಭೂಮಿ. ಸ್ವಂತ ಮನೆಗಳನ್ನು ಹೊಂದಿದ್ದ ಬಾಳಿಕೆಗಳನ್ನು ಬರ್ಕೆಗಳೆಂದು ಕರೆಯುತ್ತಿದ್ದರು. ಗುತ್ತಿನ ಯಜಮಾನರನ್ನು 'ಗುತ್ತಿನಾರ್' ಎಂದೂ, ಬರ್ಕೆಯವರನ್ನು 'ಬಾರಗ'ರೆಂದೂ ಬೀಡಿನವರನ್ನು 'ಬಲ್ಲಾಳ' ರೆಂದೂ ಕರೆಯುವುದು ವಾಡಿಕೆಯಾಗಿತ್ತು.

(ತುಳು ನಾಡವ ಸಮಾಜ, ಬಿ.ಸಚ್ಚಿದಾನಂದ ಹೆಗ್ಡೆ ಪು.95–96) ಎನ್ನುವ ಮಾತು ಸ್ಪಷ್ಟತೆಯನ್ನು ಒದಗಿಸುತ್ತದೆ. ಬಾರಗರು ಎಂದರೆ ಬೇಸಾಯದ ಭೂಮಿಯನ್ನು ನಡೆಸುತ್ತಿದ್ದವರು. ಅವರ ಮನೆತನವನ್ನು ಬಾರಿಕೆ ಮನೆತನ ಎಂದು ಗುರುತಿಲಾಗಿತ್ತು.

ಈ ಬಾರಿಕೆ ಎನ್ನುವ ಆಡಳಿತ ಘಟಕವು ಜಾತಿಗೆ ಸೀಮಿತವಾಗಿತ್ತೇ? ಎನ್ನುವ ಪ್ರಶ್ನೆ ಮುಖ್ಯವಾಗಿ ಕೇಳಬೇಕು. ಆಧುನಿಕ ಕಾಲದ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಾಳಿಕೆ, ಬಾರಿಕೆ, ಬರ್ಕೆ ಎನ್ನುವ ಪದಗಳು ಮನೆತನಗಳಿಗೆ ಹೆಸರಾಗಿ ಗುರುತಾಗಿ ಕರೆಯುವುದನ್ನು ಕಾಣುತ್ತೇವೆ. ಆದರೆ ಮನೆಗಳು ಬರ್ಕೆಯ ಮನೆ, ಬಾರಿಕದ ಇಲ್ಲ್ ಎನ್ನುವಾಗ ಅದೊಂದು ಪ್ರತಿಷ್ಠಿತ ಮನೆ ಎನ್ನುವ ಉತ್ತರ ದೊರೆಯುತ್ತದೆಯೋ ವಿನಃ ಅದಕ್ಕೆ ಕಾರಣಗಳು ಸಿಗುವುದಿಲ್ಲ. ಆಧುನಿಕಪೂರ್ವದ ತುಳು ಸಮಾಜ ವ್ಯವಸ್ಥೆಯು ಪ್ರಧಾನವಾಗಿ ಕೃಷಿ, ವ್ಯವಸಾಯವನ್ನೇ ಪ್ರಧಾನವಾಗಿ ಹೊಂದಿತ್ತು. ಭೂಮಿಯ ಒಡೆಯನೇ ಧಣಿ ಎನ್ನಿಸುತ್ತಿದ್ದ. ಭೂ ಒಡೆತನದ ಸ್ವರೂಪಕ್ಕೆ ಅನುಗುಣವಾಗಿಯೇ ಆ ಆಡಳಿತ ಘಟಕಗಳಿಗೆ ಹೆಸರುಗಳು ಬಂದಿರಬೇಕೆಂದು ಊಹಿಸಬಹುದು. ಮಾಗಣೆಯಲ್ಲಿರುವ ಪ್ರಮುಖ ಮನೆತನಗಳಲ್ಲಿ ಈ ಬರ್ಕೆಯ ಮನೆತನವೂ ಒಂದು. ಗುತ್ತು, ಬಾವ, ಪರಾರಿ, ಬಾಳಿಕೆ ಇವು ಊಳಿಗಮಾನ್ಯ ವ್ಯವಸ್ಥೆಯ ಉತ್ಪನ್ನಗಳಾಗಿಯೇ ಕಾರ್ಯನಿರ್ವಹಿಸಿದ್ದವು. ಶ್ರೇಣೀಕರಣ ವ್ಯವಸ್ಥೆಯೊಳಗೆ ಈ ಬಾಳಿಕೆಯ ಮನೆತನವು ತನ್ನದೇ ಆದ ಅಸ್ತಿತ್ವವನ್ನು ಹೊಂದಿತ್ತು ಎನ್ನಬಹುದು. ಆದರೆ ಇದು ಜಾತಿಗೆ ಸೀಮಿತವಾದ ಘಟಕವೇ ಎಂದರೆ ಲಭ್ಯವಿರುವ ಮಾಹಿತಿಗಳನ್ನು ಅನುಸರಿಸಿ ಹೇಳುವುದಾದರೆ ಅಲ್ಲ ಎಂಬ ಉತ್ತರವೇ ಮುಖ್ಯವಾಗುತ್ತದೆ. ಏಕೆಂದರೆ ಬಾಳಿಕೆ, ಬರ್ಕೆ, ಬಾರಿಕೆ ಇವು ಯಾವುದೇ ಜಾತಿ ಸಮುದಾಯಕ್ಕೆ ಕೇಂದ್ರೀಕೃತವಾಗಿರುವಂತದ್ದನ್ನು ಕಾಣುವುದಿಲ್ಲ. ಈ ಬಾಳಿಕೆ ಮನೆತನದ ಒಡೆತನವು ಕೆಲವು ಕಡೆಗಳಲ್ಲಿ ಬಂಟ ಸಮುದಾಯದಲ್ಲೂ ಇದೆ. ಅದೇ ರೀತಿ ಬಿಲ್ಲವ ಸಮುದಾಯದ ಕೈಯಲ್ಲೂ ಈ ಬಾಳಕೆ, ಬರ್ಕೆ ಮನೆತನಗಳು ಇವೆ. ಇದಕ್ಕೆ ಪೂರಕವಾಗಿ ಇತ್ತೀಚೆಗೆ ಬಾಬು ಶಿವಪೂಜಾರಿ ಮತ್ತು ಅವರ ತಂಡ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ಪ್ರಕಟಿಸಿದ ಗ್ರಂಥ 'ಬಿಲ್ಲವರ ಗುತ್ತು' ಎನ್ನುವ ಪುಸ್ತಕಕ್ಕೆ ಐತಿಹಾಸಿಕವಾದ ಮಹತ್ವವಿದೆ. ಈ ಪುಸ್ತಕದಲ್ಲಿ ಬಿಲ್ಲವ ಸಮುದಾಯದ ಅನೇಕ ಗುತ್ತು ಬರ್ಕೆಗಳ ಅಧಿಕೃತ ದಾಖಲೆಯು ಲಭ್ಯಗೊಳ್ಳುತ್ತದೆ. ತುಳುನಾಡಿನ ಸಾಂಸ್ಕೃತಿಕ ಇತಿಹಾಸ ರಚನೆಯ ಸ್ವರೂಪವನ್ನು ಜಾತಿ ನೆಲೆಯಲ್ಲಿ ವ್ಯಾಖ್ಯಾನಿಸುವಾಗ ಈ ರೀತಿಯ ಕೆಲಸಗಳು ಈಗಾಗಲೇ ಇರುವ ಸಿದ್ಧ ಮಾದರಿಯ ಚಿಂತನಾಕ್ರಮವನ್ನು ಒಡೆಯುವುದಕ್ಕೆ ಸಾಧ್ಯವಾಗುತ್ತದೆ. ಗ್ರಂಥಸ್ಥಗೊಂಡಿರುವ ದಾಖಲೆಗಳನ್ನೇ ಅಧಿಕೃತ ಎನ್ನುವುದಕ್ಕಿಂತ ಸಮಾಜ ವ್ಯವಸ್ಥೆಯಲ್ಲಿ ಪ್ರತ್ಯಕ್ಷವಾಗಿ ಸಿಗುವ ಆಕರಗಳು ಹೆಚ್ಚು ಬೆಲೆಯುಳ್ಳವು ಎನ್ನುವುದಷ್ಟೇ ಇಲ್ಲಿ ಅಭಿಮತ.

**ನಟ್ಟಿಲ್ಲ್**

ನಟ್ಟಿ ಎಂದರೆ ತುಳುವಿನಲ್ಲಿ ಬೇಸಾಯ ಎಂದರ್ಥವಿದೆ. ಇಲ್ಲ್ ಎಂದರೆ ಮನೆ. ಬೇಸಾಯ ಮಾಡುತ್ತಿದ್ದ ಮನೆಯನ್ನು ನಟ್ಟಿಲ್ಲ್ ಎಂದು ಕರೆಯುತ್ತಾರೆ. ಈ ನಟ್ಟಿಲ್ಲ್ ಪ್ರತಿಷ್ಠಿತ ಮನೆಯಾಗಿದ್ದು ಸ್ವರೂಪದಲ್ಲಿ ಸುತ್ತು ಪಡಿಪ್ಪಿರೆ ಹೊಂದಿರುವ ಮನೆಯಾಗಿದೆ. ಈ ನಟ್ಟಿಲ್ಲ್ ಮನೆತನದವರು ಬೇಸಾಯ, ಪಶುಪಾಲನೆ, ಯೋಧತನ, ಆಡಳಿತದಲ್ಲಿ ಪ್ರಮುಖಪಾತ್ರವಹಿಸಿದ್ದರು.

ತುಳುನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ನಟ್ಟಿಲ್ಲ್ ಎನ್ನುವುದಕ್ಕೆ ವಿಶೇಷವಾದ ಮಹತ್ವವಿದೆ. ಕೃಷಿ ಕೇಂದ್ರಿತವಾಗಿದ್ದ ಆಧುನಿಕಪೂರ್ವದ ಸಮಾಜದಲ್ಲಿ ಈ ನಟ್ಟಿಲ್ಲ್ ಪ್ರತಿಷ್ಠಿತ ಮನೆತನವಾಗಿತ್ತು ಎನ್ನುವುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ. ಸಾಮಾನ್ಯವಾಗಿ ದೈವಗಳ ನುಡಿಗಟ್ಟಿನಲ್ಲಿ ಬರುವ ಹೇಳಿಕೆ ಹೀಗಿದೆ: ಓ...ಓ...ಓ ನೂಲುಪಾಡಿ ಕರ್ತುಲೇ, ತಂತ್ರನುಡಿ ಪನ್ಪಿ

ಕರ್ತುಲೇ, ಮೊಯಿಲಿ ಮೂಲ್ಯರೇ, ನಟ್ಟಿಲ್ಲ ಪೂಜಾರ್ರ್ಲೆ, ಒರಿ ಅಂದ್ ಒರಿ ಅತ್ತ್ಂದ್ ಇಜ್ಜಿ.. ಸೇರಿಂಚಿತ್ತಿನ ಮಾತೆರೆನ್ಲ ಲೆತ್ತ್ ಕೊಂಡಾಡೊನುವೆ' . ಹೀಗೆ ದೈವಗಳ 'ಲೆಪ್ಪು' ವಿನಲ್ಲಿ (ಗೌರವ ನೀಡುವುದು) ಬರುತ್ತದೆ. ಈ ನುಡಿಗಟ್ಟಿನಲ್ಲಿ ತುಳುನಾಡಿನ ಪ್ರಮುಖ ಜಾತಿಸಮುದಾಯಗಳ ಉಲ್ಲೇಖವೂ ಬರುತ್ತದೆ. ಈ ಉಲ್ಲೇಖದ ಹಿನ್ನೆಲೆಯಲ್ಲಿ ಈ ಮಾತನ್ನು ವಿವೇಚಿಸುವುದಾದರೆ ನಟ್ಟಿಲ್ಲ್ ಪೂಜಾರಿ ಎನ್ನುವುದು ಎರಡು ಶಬ್ದಗಳನ್ನು ಒಳಗೊಂಡಿದೆ. ಪೂಜಾರಿ ಎನ್ನುವುದು ಜಾತಿಸೂಚಕ ಪದ. ಈ ಜಾತಿಸೂಚಕವು ತುಳುನಾಡಿನ ಬಿಲ್ಲವ ಸಮುದಾಯವನ್ನು ಕೇಂದ್ರೀಕರಿಸಿದೆ. ಈ ಬಿಲ್ಲವ ಸಮುದಾಯದ ಐಡೆಂಟಿಟಿಯು ದೈವಾರಾಧನೆ ಸಂದರ್ಭದಲ್ಲಿ ಅವರು ಮಾಡುವ ವೃತ್ತಿಯಿಂದ ಕರೆಸಿಕೊಳ್ಳುತ್ತದೆ. ಹಾಗಾಗಿ ನಟ್ಟಿಲ್ಲ್ ಎನ್ನುವ ಶಬ್ದದ ವುತ್ಪತ್ತಿಯನ್ನು ಈ ದೃಷ್ಟಿಯಿಂದ ನೋಡಬೇಕು. ನಟ್ಟಿಲ್ಲ್ ಎಂದರೆ ಬಿಲ್ಲವರಿರುವ ಸ್ಥಳ ವಿಶೇಷ ಎನ್ನುವ ಅಭಿಪ್ರಾಯವನ್ನು ಕವಿ ಪಂಜೆಮಂಗೇಶರಾಯರು ವ್ಯಕ್ತಪಡಿಸುತ್ತಾರೆ. ನಟ್ಟಿ ಎನ್ನುವುದು ತುಳು ಕೃಷಿಪ್ರಧಾನ ವ್ಯವಸ್ಥೆಯಲ್ಲಿ ವಿಶೇಷವಾದ ಪದವಾಗಿದೆ. ನಟ್ಟಿ ಎಂದರೆ ಸಾಮಾನ್ಯವಾಗಿ ಮನೆಯ ಅಗತ್ಯಕ್ಕೆ ಬೇಕಾಗುವ ತರಕಾರಿ, ದವಸ ಧಾನ್ಯಗಳನ್ನು ಬೆಳೆಯುವುದು ಎನ್ನುವ ಅರ್ಥವಿದೆ. ಆದರೆ ಇಲ್ಲಿ ನಟ್ಟಿಲ್ಲ್ ಎನ್ನುವುದು ನಟ್ಟಿಯ ಕೆಲಸ ನಿರ್ವಹಿಸುತ್ತಿದ್ದ ಮನೆ. ನಟ್ಟಿ ಎನ್ನುವುದು ಭತ್ತ, ದವಸಧಾನ್ಯಗಳನ್ನು ಬೆಳೆಸುತ್ತಿದ್ದ ಮನೆತನ ಎಂಬ ತೀರ್ಮಾನಕ್ಕೆ ಬರಬಹುದು. ತುಳುವಿನಲ್ಲಿ ನಟ್ಟಿದ ಬೇಲೆ, ನಟ್ಟಿಗ್ ಪೋತೆರ್ ಎನ್ನುವ ಶಬ್ದಗಳು ಗದ್ದೆಬೇಸಾಯದ ಇತ್ತೀಚಿನವರೆಗೂ ಪ್ರಚಲಿತವಿತ್ತು. ಈ ಮನೆತನವೂ ಊರಿನಲ್ಲಿ ಜಮೀನದಾರರಾಗಿದ್ದು ಪ್ರತಿಷ್ಠಿತ ಸ್ಥಾನಮಾನವನ್ನು ಹೊಂದಿತ್ತು. ಸಾಮಾಜಿಕವಾಗಿ ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ವಿಶೇಷ ಗೌರವ ದೊರೆಯುತ್ತಿತ್ತು.

ನಟ್ಟಿಲ್ಲ್ ಎನ್ನುವ ಮನೆತನಗಳು ತುಳುನಾಡಿನ ಸಾಂಸ್ಕೃತಿಕ ನೆಲೆಯಲ್ಲಿ ಇಂದಿಗೂ ತನ್ನ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಪ್ರತಿ ಗ್ರಾಮದಲ್ಲೂ ನಟ್ಟಿಲ್ಲ್ ಎನ್ನುವ ಮನೆತನವು ಅಸ್ತಿತ್ವ ಇತ್ತು. ತುಳುನಾಡಿನ ಪ್ರಮುಖ ಆರಾಧನೆಗಳಲ್ಲಿ ಒಂದಾಗಿರುವ ದೈವಾರಾಧನೆಯಲ್ಲಿ ಇದರ ಉಲ್ಲೇಖಗಳು ಕಂಡುಬರುತ್ತವೆ. ರಾಜನ್ ದೈವಗಳ ಗೌರವ ಸೂಚಕ ಕರೆಯುವಿಕೆಯಲ್ಲಿ ಇಂದಿಗೂ ನಟ್ಟಿಲ್ಲ್ ಎನ್ನುವ ಮನೆತನಕ್ಕೆ ವಿಶೇಷವಾದ ಮಾನ್ಯತೆ ಇದೆ.

**ಭಂಡಾರ ಮನೆ**

ತುಳು ಸಾಂಸ್ಕೃತಿಕ ಆವರಣದೊಳಗೆ ಭಂಡಾರ ಮನೆ ಎನ್ನುವುದು ಪ್ರತಿಷ್ಠಿತ ಮನೆತನವಾಗಿದೆ. ತುಳುವಿನಲ್ಲಿ ಈ ಭಂಡಾರ ಮನೆಯನ್ನು ಭಂಡಾರದಿಲ್ಲ್ ಎಂದು ಗುರುತಿಸುತ್ತಾರೆ. ಈ ಭಂಡಾರ ಮನೆಗಳು ಗ್ರಾಮ, ಮಾಗಣೆ ಸಂಬಂಧಿಸಿದ ದೈವಗಳ ಆಭರಣ, ದೈವದ ಮುಖವಾಡ, ಆಯುಧ, ಗಂಟೆ, ಪೂಜಾ ಸಾಮಗ್ರಿಗಳು, ಅಲಂಕಾರ ಸಾಮಗ್ರಿಗಳನ್ನು, ಪಲ್ಲಕ್ಕಿ, ನಿಶಾನಿ ಮೊದಲಾದವುಗಳನ್ನು ಸಂಗ್ರಹಿಸಿಡುವ ಮನೆಗಳಾಗಿವೆ.

ಗ್ರಾಮ, ಮಾಗಣೆ ಸಂಬಂಧಿಸಿದ ನೇಮ ನೆರಿಗಳು ನಡೆಯುವ ಸಂದರ್ಭದಲ್ಲಿ ದೈವಗಳ ಭಂಡಾರವನ್ನು ವಿಧಿವತ್ತಾಗಿ ನೇಮನೆರಿ ನಡೆಯುವ ಸ್ಥಳಕ್ಕೆ ತಂದು ಆರಾಧನೆಯಾಗುತ್ತದೆ. ಆರಾಧನಾ ಪ್ರಕ್ರಿಯೆಗಳು ನಡೆದ ಬಳಿಕ ಮರಳಿ ಭಂಡಾರ ಮನೆಗೆ ದೈವದ ಭಂಡಾರವು ತೆರಳುತ್ತದೆ. ಗ್ರಾಮದ ರಾಜನ್ ದೈವಗಳ ಭಂಡಾರವನ್ನು ಹೊಂದಿರುವ ಮನೆತನವನ್ನು ಭಂಡಾರ ಮನೆ ಎಂದು ಕರೆಯುತ್ತಾರೆ.

ತುಳುನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಈ ಭಂಡಾರ ಮನೆಗಳಿಗೆ ಅನನ್ಯವಾದ ಸ್ಥಾನವಿದೆ. ಈ ಭಂಡಾರ ಮನೆಗಳು ಇಂದು ಪ್ರತಿಷ್ಠಿತ ಮನೆಗಳಾಗಿ ಭಂಡಾರ ಮನೆ ಎನ್ನುವ ಅಭಿದಾನದಿಂದಲೇ ಗುರುತಿಸಲ್ಪಡುತ್ತದೆ. ಈ ಭಂಡಾರ ಮನೆಗಳು

ತುಳುನಾಡಿನ ಪ್ರತಿಗ್ರಾಮದಲ್ಲೂ ಕಾಣಲು ದೊರೆಯುತ್ತದೆ. ತುಳುನಾಡಿನ ಬಹು ಭಂಡಾರ ಮನೆಗಳ ಯಜಮಾನಿಕೆಯು ಬಿಲ್ಲವ ಜನಾಂಗದ ಸುಪರ್ದಿಯಲ್ಲಿರುವುದು ಕಂಡುಬರುತ್ತದೆ.

ಭಂಡಾರ ಮನೆಯ ಕುರಿತು ಅಧ್ಯಯನ ನಡೆಸಿರುವ ವಿದ್ವಾಂಸ ಬಾಬು ಶಿವಪೂಜಾರಿಯವರು ಹೀಗೆ ಹೇಳುತ್ತಾರೆ: "ಪ್ರಾಚೀನ ತುಳುನಾಡಿನಲ್ಲಿ ಯುದ್ಧದ ಅಸ್ತ್ರಶಸ್ತ್ರಗಳನ್ನು ಸಂಗ್ರಹಿಸಿಡುವ ಸುರಕ್ಷಿತ ತಾಣಗಳಿಗೆ ಭಂಡಾರ ಮನೆಗಳೆಂದು ಹೆಸರು" ಎನ್ನುತ್ತಾರೆ. ಭಂಡಾರ ಮನೆಗಳ ಬಗ್ಗೆ ಇಂದಿರಾ ಹೆಗಡೆಯವರು ಇದೇ ಅಭಿಪ್ರಾಯಕ್ಕೆ ಬರುತ್ತಾರೆ. "ಹಿಂದೆ ಯುದ್ಧಾಸ್ತ್ರಗಳನ್ನು ಸಂಗ್ರಹಿಸಿ ಇಡುತಿದ್ದ ಭಂಡಾರ ಮನೆಗಳು ಈಗ ದೈವ ಭಂಡಾರವಾಗಿವೆ." ಈ ಇಬ್ಬರು ವಿದ್ವಾಂಸರು ನೀಡಿರುವ ಮಾಹಿತಿಗಳು ಅಧ್ಯಯನಯೋಗ್ಯವಾಗಿವೆ. ಭಂಡಾರ ಎಂದರೆ ಶೇಖರಣೆಯ ಸ್ಥಳ. ಮಧ್ಯಕಾಲದ ರಾಜಕೀಯ ಹಿನ್ನೆಲೆಯನ್ನು ಗಮನಿಸಿದರೆ ಅದು ಅರಸುಮನೆತನಗಳ ಕಾಲ. ಈ ಅರಸುಮನೆತನಗಳ ನಡುವೆ ಬೇರೆಬೇರೆ ಕಾರಣಗಳಿಗಾಗಿ ವ್ಯಾಜ್ಯಗಳು ತಲೆದೋರಿ ಆಕ್ರಮಣಗಳು ನಡೆದಿರುವುದಕ್ಕೆ ದಾಖಲೆಗಳು ಸಿಗುತ್ತವೆ. ಇಂಥ ಸಂದರ್ಭಗಳಲ್ಲಿ ಸ್ಥಳೀಯ ಅರಸರು, ಬೀಡು ಬಲ್ಲಾಳರು ತಮ್ಮ ರಕ್ಷಣೆಗಾಗಿ ಕಾಲಾಳುಗಳನ್ನು ಇಟ್ಟುಕೊಳ್ಳುತ್ತಿದ್ದರು. ಇಂಥ ಕಾಲಾಳುಗಳನ್ನು ಹೊಂದಿರುವ ಸಂಖ್ಯೆಗೆ ಅನುಗುಣವಾಗಿ ಅವನಿಗೆ ಮಾನ ಮರ್ಯಾದೆ ಸಲ್ಲಿಕೆಯಾಗುತ್ತಿದ್ದವು. ಹೀಗೆ ಕಾಲಾಳುಗಳು, ಕದನಕ್ಕೆ ಬೇಕಾಗಿರುವ ಆಯುಧಗಳನ್ನು ಹೊಂದಿರುವ, ಶೇಖರಿಸಿರುವ ಆಲಯಕ್ಕೆ ಭಂಡಾರ ಮನೆ ಎನ್ನುತ್ತಿದ್ದರು. ಕಾಲಾಂತರದಲ್ಲಿ ವ್ಯವಸ್ಥೆ ಬದಲಾಯಿತು. ಈ ಭಂಡಾರ ಮನೆಗಳು ದೈವಗಳಿಗೆ ಸಂಬಂಧಿಸಿದ ಪರಿಕರಗಳನ್ನು ಶೇಕರಿಸಿಡುವುದಕ್ಕೆ ಸೀಮಿತವಾಯಿತು.

**ಗುರಿಕಾರ ಮನೆ**

ಗುರಿಕಾರ ಎಂದರೆ ಒಂದು ಅಧಿಕಾರ ಸ್ಥಾನವನ್ನು ಹೊಂದಿರುವವ. ಗುರಿಕಾರ ಎಂದರೆ ಗ್ರಾಮ ವ್ಯಾಪ್ತಿಯ ಅಧಿಕಾರಿ, ಮುಖ್ಯಸ್ಥ, ಒಡೆಯ ಎನ್ನುವ ಅರ್ಥವಿದೆ. ಈ ಗುರಿಕಾರರನ್ನು ಅರಸನು ನೇಮಕ ಮಾಡುತ್ತಿದ್ದನು.

ತುಳುನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಗುರಿಕಾರ ಮನೆಗೆ ವಿಶೇಷ ಸ್ಥಾನಮಾನವಿದೆ. ಗುತ್ತು, ಬೀಡು ಮನೆಗಳ ಮುಖ್ಯಸ್ಥ ಗುರಿಕಾರ ಎನ್ನುವ ಅರ್ಥವೂ ಇದೆ. ಇದೇ ರೀತಿಯಲ್ಲಿ ಒಂದು ನಿರ್ದಿಷ್ಟ ಜಾತಿ ಸಮುದಾಯಗಳಿಗೂ ಆ ಜಾತಿನೀತಿಯನ್ನು ಪಾಲಿಸುವುದಕ್ಕಾಗಿ ಗುರಿಕಾರರು ಇದ್ದರು. ಸಾಮಾನ್ಯವಾಗಿ ತುಳುನಾಡಿನ ಪ್ರತಿ ಜಾತಿ ಸಮುದಾಯದೊಳಗೂ ಜಾತಿ ಮುಖ್ಯಸ್ಥರಿರುತ್ತಾರೆ. ಇವರನ್ನು ಗುರಿಕಾರರೆಂದು ಕರೆಯುತ್ತಾರೆ. ಈ ಜಾತಿ ಮುಖ್ಯಸ್ಥರು ವಾಸಮಾಡುವ ಮನೆಯನ್ನು ಗುರಿಕಾರ ಮನೆ ಎಂದು ಕರೆಯುತ್ತಾರೆ.

ಈ ಗುರಿಕಾರ ಮನೆತನದವರು ಸಮಾಜದ ರೀತಿ ರಿವಾಜುಗಳನ್ನು, ಕ್ರಮಕಟ್ಟಳೆಗಳನ್ನು, ಸಂಸ್ಕೃತಿ ಸಂಪ್ರದಾಯವನ್ನು ರಕ್ಷಣೆ ಮಾಡುವ ಮತ್ತು ಪಾಲನೆ ಮಾಡುವಂತೆ ನೋಡಿಕೊಳ್ಳುತ್ತಿದ್ದರು. ಸಮುದಾಯದ ಒಳಗೆ ನಡೆಯುವ ಯಾವುದೇ ಶುಭ– ಅಶುಭ ಕೆಲಸಗಳಲ್ಲಿ ಗುರಿಕಾರ ಮನೆಯವರದ್ದೇ ಮುಂದಾಳುತನವಿರುತ್ತದೆ. ಹಿಂದಿನ ಕಾಲದಲ್ಲಿ ಗುರಿಕಾರ ಮನೆಗಳು ಶ್ರೀಮಂತ ಮತ್ತು ಪ್ರತಿಷ್ಠಿತ ಮನೆಗಳಾಗಿದ್ದವು. ಮದುವೆಗೆ ಸಂಬಂಧಿಸಿದ ವಧುವಿನ ಒಡವೆಗಳನ್ನು, ಅಡುಗೆಗೆ ಬೇಕಾಗುವ ಸವಲತ್ತುಗಳನ್ನು ಈ ಗುರಿಕಾರ ಮನೆಗಳು ಒದಗಿಸುತ್ತಿದ್ದವು. ಸಮುದಾಯಕ್ಕೆ ಸಂಬಂಧಿಸಿದ ಯಾವುದೇ ಕೆಲಸಗಳಲ್ಲಿ ಗುರಿಕಾರ ಮನೆಯ ಹಾಜರಾತಿಯಿಲ್ಲದೆ ಯಾವುದೂ ನಡೆಯುತ್ತಿರಲಿಲ್ಲ. ಹಾಗಾಗಿ ತುಳುನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಈ ಗುರಿಕಾರ ಮನೆಗಳಿಗೆ ಮಹತ್ವದ ಸ್ಥಾನವಿದೆ.

**ಪರಾಮರ್ಶನ ಗ್ರಂಥಗಳು**


- ಚಿನ್ನಪ್ಪ ಗೌಡ, ಕೆ. (1990). *ಭೂತಾರಾಧನೆ ಜಾನಪದೀಯ ಅಧ್ಯಯನ.* ಮದಿಪು ಪ್ರಕಾಶನ.
- ಗಣಪತಿರಾವ್ ಐಗಳ್, ಎಂ. (2004). *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ.* ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ.
- ಪೂವಪ್ಪ ಗೌಡ, (2008). *ಉಳ್ಳಾಕುಳು:ಐತಿಹಾಸಿಕತೆ, ಪ್ರಾದೇಶಿಕತೆ, ಮತ್ತು ಆರಾಧನಾ ಸ್ವರೂಪ.* ಮಂಗಳೂರು ವಿಶ್ವವಿದ್ಯಾಲಯ.
- ವಿವೇಕ ರೈ, ಬಿ. ಎ. (1985). *ತುಳು ಜನಪದ ಸಾಹಿತ್ಯ,* ಕನ್ನಡ ಸಾಹಿತ್ಯ ಪರಿಷತ್.